**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್, ಸಿ ನ್ಯಾಯಾಲಯ, ನವಲಗುಂದ.**

**ಸಿ.ಸಿ ನಂ. 452/2024**

**ಪಿರ್ಯಾದಿದಾರರುಃ ನವಲಗುಂದ ಪಿ. ಎಸ್.**

**ವಿರುದ್ಧ**

**ಆರೋಪಿತಃ 1. ರಾಜೇಸಾಬ ಅಬ್ದುಲಸಾಬ ತಹಶೀಲ್ದಾರ.**

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿತನ ಹೇಳಿಕೆ

**ಪ್ರಶ್ನೆ 1 : ನ್ಯಾಯಾಲಯದಲ್ಲಿ ಆದ ಸಾಕ್ಷಿದಾರರ ಸಾಕ್ಷ್ಯ ಕೇಳಿದ್ದೀರಾ?**
**ಉತ್ತರಃ ಕೇಳಿದ್ದೇನೆ.**

**ಪ್ರಶ್ನೆ 2 : ಪ್ರಾ.ಸಾ-2/ಚಾ.ಸಾ-1 ಕಲಮೇಶ ಮಹಾದೇವ ಬನ್ನೂರು** ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ದಿಃ 01-08-2021 ರಂದು ನಾನು ಹಾಗೂ ಸಿಬ್ಬಂದಿ ಠಾಣೆಯಲ್ಲಿದ್ದಾಗ ಸಂ.05.00 ಗಂಟೆಗೆ ಶಲವಡಿ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಆರೋಪಿ ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿರುವಾಗಿ ಬಗ್ಗೆ ಗೊತ್ತಾಗಿದ್ದು ಆಗ ಚಾಸಾ-4 ರವರ ಮುಖಾಂತರ ಚಾಸಾ-2 ಮತ್ತು 3 ರವರನ್ನು ಕರೆಯಿಸಿ ಸಂ.05.15 ಕ್ಕೆ ಠಾಣೆಯಿಂದ ಹೊರಟು ಸಂ.05.40 ಗಂಟೆಗೆ ಘಟನಾ ಸ್ಥಳ ತಲುಪಿ ವೀಕ್ಷಣೆ ಮಾಡುತ್ತಿದ್ದಾಗ ಆರೋಪಿ ಘಟನಾ ಸ್ಥಳದಲ್ಲಿ ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಸದರಿಯವನು ನಮ್ಮನ್ನು ನೋಡಿ ಸ್ಥಳದಿಂದ ಓಡಿ ಪರಾರಿಯಾಗಿರುತ್ತಾರೆ. ಅಲ್ಲಿದ್ದವರನ್ನು ವಿಚಾರಿಸಿದಾಗ ಆರೋಪಿಯ ಹೆಸರನ್ನು ರಾಜೇಸಾಬ ಅಬ್ದುಲಸಾಬ ತಹಶೀಲ್ದಾರ ಎಂದು ತಿಳಿಸಿದ್ದು, ಸ್ಥಳದಿಂದ 90 ML ನ 192 ಓರಿಜಿನಲ್ ಚಾಯಿಸ್ ವಿಸ್ಕಿ ಪೌಚಗಳು ಮತ್ತು 1 ಚೀಲವನ್ನು ಜಪ್ತಿಪಡಿಸಿಕೊಂಡು ಎಲ್ಲಾ ಮದ್ಯದ ಪೌಚಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಜಪ್ತಿಪಡಿಸಿಕೊಂಡು ಪಂಚನಾಮೆ ಸಂ.05.45 ರಿಂದ 06.45 ವರೆಗೆ ನಾನು ಪೂರೈಸಿರುತ್ತೇನೆ ಎಂದು ತಮ್ಮ ಸಾಕ್ಷ್ಯದಲ್ಲಿ ಹೇಳಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ ಸುಳ್ಳು.**

**ಪ್ರಶ್ನೆ 3 : ಪ್ರಾ.ಸಾ-3/ಚಾ.ಸಾ-4 ರಾಮಪ್ಪ ಎಸ್. ಭಗವತಿ** ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ದಿಃ 01-08-2021 ರಂದು ನಾನು, ಚಾಸಾ-1 ಹಾಗೂ ಸಿಬ್ಬಂದಿ ಠಾಣೆಯಲ್ಲಿದ್ದಾಗ ಸಂ.05.00 ಗಂಟೆಗೆ ಶಲವಡಿ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಆರೋಪಿ ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿರುವಾಗಿ ಬಗ್ಗೆ ಗೊತ್ತಾಗಿದ್ದು ಆಗ ನಾನು ಚಾಸಾ-2 ಮತ್ತು 3 ರವರನ್ನು ಕರೆಯಿಸಿ ಸಂ.05.15 ಕ್ಕೆ ಠಾಣೆಯಿಂದ ಹೊರಟು ಸಂ.05.40 ಗಂಟೆಗೆ ಘಟನಾ ಸ್ಥಳ ತಲುಪಿ ವೀಕ್ಷಣೆ ಮಾಡುತ್ತಿದ್ದಾಗ ಆರೋಪಿ ಘಟನಾ ಸ್ಥಳದಲ್ಲಿ ಅನಧಿಕೃತವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಸದರಿಯವನು ನಮ್ಮನ್ನು ನೋಡಿ ಸ್ಥಳದಿಂದ ಓಡಿ ಪರಾರಿಯಾಗಿರುತ್ತಾರೆ. ಅಲ್ಲಿದ್ದವರನ್ನು ವಿಚಾರಿಸಿದಾಗ ಆರೋಪಿಯ ಹೆಸರನ್ನು ರಾಜೇಸಾಬ ಅಬ್ದುಲಸಾಬ ತಹಶೀಲ್ದಾರ ಎಂದು ತಿಳಿಸಿದ್ದು, ಸ್ಥಳದಿಂದ 90 ML ನ 192 ಓರಿಜಿನಲ್ ಚಾಯಿಸ್ ವಿಸ್ಕಿ ಪೌಚಗಳು ಮತ್ತು 1 ಚೀಲವನ್ನು ಜಪ್ತಿಪಡಿಸಿಕೊಂಡು ಎಲ್ಲಾ ಮದ್ಯದ ಪೌಚಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಜಪ್ತಿಪಡಿಸಿಕೊಂಡು ಪಂಚನಾಮೆ ಸಂ.05.45 ರಿಂದ 06.45 ವರೆಗೆ ಚಾಸಾ-1 ಪೂರೈಸಿರುತ್ತಾರೆ. ನನ್ನ ಹೇಳಿಕೆಯನ್ನು ಚಾಸಾ-9 ರವರಿಗೆ ನೀಡಿರುತ್ತೇನೆ ಎಂದು ತಮ್ಮ ಸಾಕ್ಷ್ಯದಲ್ಲಿ ಹೇಳಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ ಸುಳ್ಳು.**

**ಪ್ರಶ್ನೆ 4 : ಪ್ರಾ.ಸಾ-5/ಚಾ.ಸಾ-9 ಧರ್ಮಗೌಡ ಬಸನಗೌಡ ಪಾಟೀಲ** ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ದಿಃ 01-08-2021 ರಂದು ನಾನು ಠಾಣೆಯಲ್ಲಿದ್ದಾಗ ಚಾಸಾ-1 ರವರು ರಾ.07.45 ಗಂಟೆಗೆ ಠಾಣೆಗೆ ಹಾಜರಾಗಿ ಲಿಖಿತ ದೂರು, ಪಂಚನಾಮೆ ಹಾಗೂ ಮುದ್ದೆ ಮಾಲನ್ನು ಹಾಜರು ಪಡಿಸಿದ್ದು ಅದರ ಆಧಾರದ ಮೇಲೆ ಠಾಣಾ ಗುನ್ನಾ ಸಂಃ 125/2021 ನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ನಂತರ ನ್ಯಾಯಾಲಯಕ್ಕೆ ಸ್ವತ್ತಿನ ವಿವರಣೆ ಪಟ್ಟಿಯನ್ನು ಕಳುಹಿಸಿರುತ್ತೇನೆ. ಚಾಸಾ-4 ರಿಂದ 6 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ದಿಃ 15-09-2021 ರಂದು ಜಪ್ತಾದ ಮುದ್ದೆ ಮಾಲನ್ನು ಚಾಸಾ-7 ರವರ ಮುಖಾಂತರ ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇನೆ. ನಂತರ ವರದಿಯನ್ನು ದಿಃ 28-09-2021 ರಂದು ಪಡೆದುಕೊಂಡು

ಆರೋಪಿಯ ವಿರುದ್ದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ತಮ್ಮ ಸಾಕ್ಷ್ಯದಲ್ಲಿ ಹೇಳಿರುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ ಸುಳ್ಳು.**

**ಪ್ರಶ್ನೆ 5 : ನಿಮಗೆ ಮತ್ತೇನಾದರೂ ಹೇಳುವುದು ಇದೆಯಾ?**

**ಉತ್ತರಃ ಇಲ್ಲ.**

**ಪ್ರಶ್ನೆ 6 : ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತೀರಾ?**

**ಉತ್ತರಃ ಇಲ್ಲ.**

**(ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಆತನು ಕೊಟ್ಟ ಉತ್ತರವನ್ನು ಯತಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು)**

ಸಹಿ/-

**ದಿನಾಂಕಃ20-02-2026** **ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ಸ್ಥಳಃನವಲಗುಂದ.** **ನವಲಗುಂದ.**